**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ವೈ.ಎ.ನಾರಾಯಣಸ್ವಾಮಿ ಇವರು ನಿಯಮ-330 ರಡಿ ಕೇಳಿರುವ ಸೂಚನೆ.**

**ಬೆಂಗಳೂರು ಟರ್ಫ್ ಕ್ಲಬ್ (ಬಿ.ಟಿ.ಸಿ) ನಲ್ಲಿ ಆಗುತ್ತಿರುವ ಮೋಸ, ವಂಚನೆ, ನಿಯಮ ಬಾಹಿರ ಚಟುವಟಿಕೆಗಳು, ಸರ್ಕಾರದ ಆಡಳಿತವನ್ನು ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ಪತ್ರಿಕೆಯಲ್ಲಿ ವಿಸ್ತೃತವಾಗಿ ವರದಿಯಾಗಿದ್ದು, ಈ ಸಂಬಂಧ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿಯೂ ಸಹ ಚರ್ಚೆಯಾಗಿದ್ದು, ಸದರಿ ಬೆಂಗಳೂರು ಟರ್ಫ್ ಕ್ಲಬ್ ನವರು ನೂರಾರು ಕೋಟಿ ರೂಪಾಯಿಗಳು ತೆರಿಗೆಯನ್ನು ಸರ್ಕಾರಕ್ಕೆ ವಂಚಿಸಿದ್ದು, ಈ ಎಲ್ಲಾ ವಿಚಾರಗಳ ಬಗ್ಗೆ ಚರ್ಚಿಸಲು ನಿಯಮ 330ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗಿ ವಿನಂತಿಸಿರುತ್ತಾರೆ.**

<u>ಸನ್ಮಾನ್ಯ ಮುಖ್ಯಮಂತ್ರಿಯವರ ಉತ್ತರ:</u>

**ಬಿಟಿಸಿ ಜಮೀನು ಕೋರ್ಟ್ ತಕರಾರು ಹಿನ್ನೆಲೆ:** ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್ ಸಂಸ್ಥೆಯ ಜಮೀನನ್ನು ಹಿಂದಿನ ಮೈಸೂರು ಮಹಾರಾಜರ ಸರ್ಕಾರವು ಕುದುರೆ ಓಡಿಸುವ ಸ್ಪರ್ಧೆಯನ್ನು ನಡೆಸುವ ಉದ್ದೇಶಕ್ಕಾಗಿ ದಿನಾಂಕ:09/09/1923ರಲ್ಲಿ ಒಟ್ಟು-83 ಎಕರೆ 14 ಗುಂಟೆ ಜಮೀನನ್ನು ಬಾಡಿಗೆ ಆಧಾರದ ಮೇಲೆ ಸಂಸ್ಥೆಗೆ ನೀಡಲಾಗಿರುತ್ತದೆ. ನಂತರ 21/12/1983ರಲ್ಲಿ ರಾಜ್ಯ ಸರ್ಕಾರದ ಒಪ್ಪಂದದಂತೆ ಜಮೀನನ್ನು 1/1/1981 ರಿಂದ ಜಾರಿಗೆ ಬರುವಂತೆ ಬಾಡಿಗೆ ರೂ.5.00 ಲಕ್ಷಗಳಂತೆ ಲೀಸ್ ಆಧಾರದ ಮೇಲೆ ಬಿಟಿಸಿ ಸ್ವಾಧೀನಕ್ಕೆ ನೀಡಲಾಗಿತ್ತು. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಸೇರಿದ ಸದರಿ ಜಮೀನಿನ ಗುತ್ತಿಗೆ ಅವಧಿಯು ದಿನಾಂಕ:31/12/2009 ರಂದು ಮುಕ್ತಾಯಗೊಂಡಿದ್ದರಿಂದ, ಆ ದಿನಾಂಕದಿಂದಲೇ ಜಾರಿಗೆ ಬರುವಂತೆ ಗುತ್ತಿಗೆ ಅವಧಿಯನ್ನು ರದ್ದುಗೊಳಿಸಿ, ಗುತ್ತಿಗೆಗೆ ನೀಡಲಾದ ಜಮೀನನ್ನು ಇಲಾಖೆಯ ವಶಕ್ಕೆ ಪಡೆಯಲು ಸರ್ಕಾರದ ಆದೇಶ ಸಂಖ್ಯೆ:ಲೋಇ 211 ಬಿಎಂಎಸ್/2005, ದಿನಾಂಕ:25/09/2008ರಲ್ಲಿ ಆದೇಶಿಸಲಾಗಿದೆ.

ಹಿಂದಿನ 1998-99ರ ಸಾಲಿಗೆ ಸಂಬಂಧಿಸಿದ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ರಾಜಸ್ವ ಸ್ವೀಕೃತಿ) ವರದಿಯಲ್ಲಿ ಬಿಟಿಸಿಗೆ ಕಡಿಮೆ ಗುತ್ತಿಗೆ ಬಾಡಿಗೆ ನಿಗಧಿಪಡಿಸಿದ್ದರಿಂದಾಗಿ ಸರ್ಕಾರಕ್ಕೆ ರೂ.71.87 ಕೋಟಿ ನಷ್ಟವಾಗಿತ್ತು ಎಂದು ಆಕ್ಷೇಪಿಸಲಾಗಿತ್ತು.

ಇನ್ನು ಬೆಂಗಳೂರು ಟರ್ಫ್ ಕ್ಲಬ್ ಆವರಣವನ್ನು ಖಾಲಿ ಮಾಡಿ ಸರ್ಕಾರಕ್ಕೆ ಹಸ್ತಾಂತರಿಸುವ ಹೈಕೋರ್ಟ್‌ನ ದಿ:22/03/2010ರ ಆದೇಶವನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ SLP ಸಂಖ್ಯೆ:21157/2010 ದಾಖಲಿಸಿ ಪ್ರಶ್ನಿಸಿದ್ದು, ಮಾನ್ಯ ಸರ್ವೋಚ್ಛ ನ್ಯಾಯಾಲಯವು ತನ್ನ ಮದ್ಯಂತರ ಆದೇಶದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಿರುತ್ತದೆ (Status quo to be maintained). ಬಿಟಿಸಿಗೆ ಸಂಬಂಧಿಸಿದ ಜಮೀನು ತಕರಾರು ಹಾಗೂ ಕಾನೂನು ವ್ಯಾಜ್ಯಗಳು ಕೋರ್ಟ್ ನಲ್ಲಿ ಬಾಕಿ ಇರುತ್ತದೆ. ಈ ವಿಷಯದ ಬಗ್ಗೆ ಚರ್ಚಿಸಿದ ನಂತರ ದಿನಾಂಕ: 27.12.2019ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಯಥಾಸ್ಥಿತಿ ಕಾಪಾಡಲು ತೀರ್ಮಾನಿಸಲಾಗಿದೆ.

**ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ(2019-20) 15ನೇ ವಿಧಾನ ಸಭೆಯ 4ನೇ ವರದಿ:** ಪಿ.ಎ.ಸಿ ಸಮಿತಿಯ ಶಿಫಾರಸ್ಸುಗಳಲ್ಲಿ (BTCಗೆ ಸಂಬಂದಿಸಿದಂತೆ) ಉಲ್ಲೇಖಿಸಿದ 03 ಪ್ರಮುಖ

ಅಂಶಗಳ ಮೇಲೆ ಇಲಾಖೆಗಳಿಂದ ಅನುಸರಣಾ ವರದಿಯನ್ನು ಕೋರಲಾಗಿತ್ತು. ಸಮಿತಿಯ ಶಿಫಾರಸ್ಸಿನ ಅಂಶಗಳೆಂದರೆ;

1. ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಬಿಟಿಸಿಗೆ ಸಂಬಂಧಿಸಿದ ಬಾಕಿ ಇರುವ ಪ್ರಕರಣವನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಲು ಸರ್ಕಾರದ ವತಿಯಿಂದ ಕ್ರಮ ಕೈಗೊಳ್ಳುವ ಬಗ್ಗೆ.
2. ಬೆಂಗಳೂರು ಟರ್ಫ್ ಕ್ಲಬ್‌ನಿಂದ ಬಾಕಿ ಇರುವ ಬಾಡಿಗೆ ಮೊತ್ತದ ವಸೂಲಾತಿ ಬಗ್ಗೆ.
3. ಬೆಂಗಳೂರು ಟರ್ಫ್ ಕ್ಲಬ್‌ಗೆ ನೀಡಲಾಗಿರುವ ಪರವಾನಗಿಯನ್ನು ರದ್ದುಗೊಳಿಸುವ ಬಗ್ಗೆ.

**PAC ಸಮಿತಿಯ ಶಿಫಾರಸ್ಸಿನ ಅಂಶ**: ಮೈಸೂರು ರೇಸ್ ಕೋರ್ಸ್ ಲೈಸೆನ್ಸಿಂಗ್ ಆಕ್ಟ್-1952 (ಪ್ರಸ್ತುತ ಕರ್ನಾಟಕ ರೇಸ್ ಕೋರ್ಸ್ ಗಳಿಗೆ ಪರವಾನಗಿ ನೀಡುವ ಕಾಯ್ದೆ,2020) ಗಳನ್ನು BTC ಸಂಸ್ಥೆಯು ಉಲ್ಲಂಘಿಸಿರುವುದರಿಂದ ಆರ್ಥಿಕ ಇಲಾಖೆಗೆ ಪರವಾನಗಿಯನ್ನು ರದ್ದು ಮಾಡುವ ಸಂಪೂರ್ಣ ಅಧಿಕಾರವಿದ್ದರೂ, ಇಲ್ಲಿಯವರೆವಿಗೂ ಯಾವುದೇ ಕ್ರಮ ವಹಿಸದಿರುವುದು ತೀರ ವಿಷಾದನೀಯವೆಂದು ಸಮಿತಿಯು ಖೇದ ವ್ಯಕ್ತಪಡಿಸುತ್ತದೆ. ಪರವಾನಗಿಯ ನವೀಕರಣವನ್ನು ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆ ಪಡೆದೇ ಮಾಡಲಾಗಿದ್ದು, ಪರವಾನಗಿಯನ್ನು ರದ್ದುಗೊಳಿಸಬೇಕಿದ್ದರೂ, ಹಣಕಾಸು ಖಾತೆಯನ್ನು ನಿರ್ವಹಿಸುತ್ತಿರುವ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆರ್ಥಿಕ ಇಲಾಖೆಯ ಅಧಿಕಾರಿಗಳು ಸಾಕ್ಷ್ಯ ಒದಗಿಸಿದ್ದರಿಂದ, ಮೇಲ್ಕಂಡ ಕಾಯ್ದೆ ಮತ್ತು ನಿಯಮಾವಳಿಗಳನ್ನು ಬೆಂಗಳೂರು ಟರ್ಫ್ ಕ್ಲಬ್ ಸಂಸ್ಥೆಯು ಉಲ್ಲಂಘನೆ ಮಾಡಿರುವುದರಿಂದ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಶೀಘ್ರವಾಗಿ ತಂದು ಸಂಸ್ಥೆಗೆ ನೀಡಿರುವ ಪರವಾನಗಿಯನ್ನು ರದ್ದುಗೊಳಿಸಲು ಆರ್ಥಿಕ ಇಲಾಖೆಯ ಅಧಿಕಾರಿಗಳು ಜರೂರಾಗಿ ಕ್ರಮ ವಹಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಮೇಲಿನ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯು ಶಿಫಾರಸ್ಸು ಮಾಡಿರುವ ಅಂಶಗಳಿಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ದಿನಾಂಕ:10.06.2022ರ ಪತ್ರದಲ್ಲಿ ಉತ್ತರವನ್ನು ನೀಡಲಾಗಿರುತ್ತದೆ. ಇದನ್ನು **ಅನುಬಂಧ**ದಲ್ಲಿರಿಸಿದೆ.

**ವಾಣಿಜ್ಯ ತೆರಿಗೆಗಳ ಇಲಾಖೆಯ ಬುಕ್ಕಿಗಳ ತಪಾಸಣಾ ವರದಿ:** ವಾಣಿಜ್ಯ ತೆರಿಗೆಗಳ ಇಲಾಖೆಯು ಬೆಂಗಳೂರು ಟರ್ಫ್ ಕ್ಲಬ್‌ನ 20 ಬುಕ್ಕಿಗಳನ್ನು ತಪಾಸಣೆಗೆ ಒಳಪಡಿಸಿದ್ದು, ಸದರಿ ಬುಕ್ಕಿಗಳ ಒಂದು ಬೆಟ್ಟಿಂಗ್ ನ ಸರಾಸರಿ ಮೊತ್ತ ರೂ. 194/- ಗಳಿದ್ದು, ಆದರೆ, ಬೆಂಗಳೂರು ಟರ್ಫ್ ಕ್ಲಬ್ ರವರ ಪುಸ್ತಕಗಳಲ್ಲಿ ಲಭ್ಯವಾದ ಒಂದು ಬೆಟ್ಟಿನ ಸರಾಸರಿ ಮೊತ್ತ ರೂ.100/-ಗಳಾಗಿರುತ್ತದೆ. ಈ ಎಲ್ಲಾ 20 ಪ್ರಕರಣಗಲ್ಲಿಯೂ ರೂ.94/- (ಪ್ರತಿ ಬೆಟ್ಟಿಗೆ) ಗಳ ವ್ಯತ್ಯಾಸ ಕಂಡು ಬಂದಿರುತ್ತದೆ. ಎಲ್ಲಾ 20 ಪ್ರಕರಣಗಳಲ್ಲಿಯೂ, ತಪಾಸಣಾ ವರದಿಯ ಆಧಾರದ ಮೇಲೆ ನ್ಯಾಯ ನಿರ್ಣಯ ಪ್ರಕ್ರಿಯೆಯನ್ನು ಕೈಗೊಂಡಿದ್ದು, ಲೆಕ್ಕ ಪರಿಶೋಧನಾ ಅಧಿಕಾರಿಗಳು ರೂ.62.85 ಕೋಟಿ ಬಚ್ಚಿಟ್ಟ ವಹಿವಾಟಿಗೆ ಸಂಬಂಧಿಸಿದಂತೆ ರೂ.14.20 ಕೋಟಿಗಳ ಸರಕು ಮತ್ತು ಸೇವಾ ತೆರಿಗೆ ಭಾದ್ಯತೆಯನ್ನು ಪತ್ತೆಹಚ್ಚಿ ನಿಯಮಾನುಸಾರ ಕ್ರಮವನ್ನು ಕೈಗೊಳ್ಳಲಾಗಿದೆ.

**ಸಿ.ಸಿ.ಬಿ. ಘಟಕ ವಿಶೇಷ ವಿಚಾರಣ ದಳದ ಪರಿಶೀಲನಾ ವರದಿ:** ದಿನಾಂಕ: 12.01.2024ರಂದು ಮಧ್ಯಾಹ್ನ 14.30 ಗಂಟೆಗೆ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಸಿ.ಸಿ.ಬಿ. ಪೊಲೀಸ್ ಇನ್‌ಸ್ಪೆಕ್ಟರ್ ರವರ ದೂರಿನ ಮೇರೆಗೆ ಹೈಗ್ರೌಂಡ್ಸ್ ಪೊಲೀಸ್ ಠಾಣೆ ಮೊ.ಸಂ. 09/2024, ಕಲಂ:12 of

The Mysore Betting Tax (Karnataka Amendment) Act, 1980 Karnataka Act No-22 of 1980 ಮತ್ತು ಕಲಂ: 78(a)(i) of Karnataka Police Act 1963 ಮತ್ತು ಕಲಂ: 420 ಐಪಿಸಿ ರೀತ್ಯ ಪ್ರಕರಣ ದಾಖಲಿಸಲಾಗಿರುತ್ತದೆ.

ದಿನಾಂಕ: 12.01.2024ರಂದು ಸಿಸಿಬಿ ದಳ ಮತ್ತು ಹೈಗ್ರೌಂಡ್ಸ್ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಗಳನ್ನೊಳಗೊಂಡ ಒಟ್ಟು 4 ತಂಡಗಳಲ್ಲಿ ಒಟ್ಟು 66 ಪೊಲೀಸ್ ಅಧಿಕಾರಿ / ಸಿಬ್ಬಂದಿಗಳು ಟರ್ಫ್ ಕ್ಲಬ್‌ನ ಆವರಣದಲ್ಲಿರುವ ಬೆಟ್ಟಿಂಗ್ ಕೌಂಟರ್ ಮತ್ತು ಬುಕ್‌ಮೇಕರ್ಸ್ ಸ್ಟಾಲ್‌ಗಳ ಮೇಲೆ ದಾಳಿ ಕೈಗೊಂಡಿದ್ದು, ಸದರಿ ಪ್ರಕರಣದಲ್ಲಿ 27 ಜನ ಬುಕ್ ಮೇಕರ್ಸ್, 7 ಜನ ಅಧಿಕೃತ ಬುಕ್ಕಿಗಳು ಮತ್ತು 47 ಜನ ಬುಕ್‌ಮೇಕರ್ಸ್ ಸ್ಟಾಲ್‌ಗಳಲ್ಲಿ ಕೆಲಸ ಮಾಡುವ ಸಹಾಯಕರನ್ನು ಸೇರಿದಂತೆ ಒಟ್ಟು 80 ಜನರನ್ನು ವಶಕ್ಕೆ ಪಡೆದುಕೊಂಡು, ಒಟ್ಟು 3,45,74,040-00 ಗಳ ನಗದು ಹಣ ಹಾಗೂ ಈ ಕೃತ್ಯಕ್ಕೆ ಬಳಸಿರುವ 56 ಮೊಬೈಲ್ ಫೋನ್‌ಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಸಿಸಿಬಿ ಘಟಕದ ವಿಶೇಷ ವಿಚಾರಣಾ ದಳದಲ್ಲಿ ಮುಂದುವರೆಸಿದ್ದು ಪ್ರಕರಣದ ತನಿಖಾ ಕಾಲದಲ್ಲಿ ಬುಕ್‌ಮೇಕರ್ ಸ್ಟಾಲ್ ಮಾಲೀಕರುಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ಪಿಟಿಷನ್ ನಂಬರ್: 795/2024ರಲ್ಲಿ ಕಲಂ.482 ಸಿಆರ್‌ಪಿಸಿ ರಡಿ ಅರ್ಜಿಯನ್ನು ಸಲ್ಲಿಸಿದ ಮೇರೆಗೆ ದಿನಾಂಕ: 29.01.2024 ರಂದು ಪ್ರಕರಣದ ತನಿಖೆಗೆ ಮಾನ್ಯ ಉಚ್ಚ ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಿರುತ್ತದೆ.

**ಆಸ್ತಿ ತೆರಿಗೆಯ ಬಗ್ಗೆ** : ಬೆಂಗಳೂರು ಟರ್ಫ್ ಕ್ಲಬ್‌ಗೆ ಕುದುರೆ ಓಡಿಸುವ ಸ್ಪರ್ಧೆಯನ್ನು ನಡೆಸಲು ಒಟ್ಟು-83 ಎಕರೆ 14 ಗುಂಟೆ ಜಮೀನನ್ನು ಬಾಡಿಗೆ ಆಧಾರದ ಮೇಲೆ ನೀಡಲಾಗಿರುತ್ತದೆ. ಬೆಂಗಳೂರು ಟರ್ಫ್ ಕ್ಲಬ್‌ನ ಜಮೀನು/ನಿವೇಶನದ ಅಳತೆ ಕುರಿತಂತೆ ಜಂಟಿ ಆಯುಕ್ತರು (ಪೂರ್ವ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು ವಿಚಾರಣೆ ನಡೆಸಿ ಸದನ ಸಮಿತಿ ಸದಸ್ಯರು ನಿರ್ದೇಶಿಸಿದಂತೆ ಆಸ್ತಿ ತೆರಿಗೆ ನಿಗಧಿಸಪಡಿಸುವ ಸಲುವಾಗಿ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಮತ್ತು ಪಾಲಿಕೆಯ ಅಧಿಕಾರಿಗಳು, ಬೆಂಗಳೂರು ಟರ್ಫ್ ಕ್ಲಬ್ ನ ಸದಸ್ಯರ ನೇತೃತ್ವದಲ್ಲಿ ಜಂಟಿ ತಪಾಸಣೆ ನಡೆಸಿ ಸದರಿ ಸ್ವತ್ತಿನ ನಿವೇಶನದ ಅಳತೆ 71 ಎಕರೆ 25 ಗುಂಟೆ (31,19,985 ಚದರ ಅಡಿ) ಎಂದು ವರದಿ ಸಲ್ಲಿಸಿರುವುದನ್ನು ಪರಿಗಣಿಸಿ ಹಾಗೂ ದಿನಾಂಕ:23.11.2023ರಂದು ಸಹಾಯಕ ಕಂದಾಯ ಅಧಿಕಾರಿ (ವಸಂತ ನಗರ) ರವರು ವರದಿ ಅನ್ವಯ ನಿಯಮಾನುಸಾರ ಆಸ್ತಿ ತೆರಿಗೆಯನ್ನು ಮರು ನಿಗದಧಿಪಡಿಸಿ ಈಗಾಗಲೇ ಭಾಗಶಃ ವ್ಯತ್ಯಾಸದ ಮೊತ್ತವನ್ನು ಪಾವತಿಸಿರುವುದನ್ನು ಉಳಿಕೆ ಪಾವತಿಸಬೇಕಾದ ವ್ಯತ್ಯಾಸದ ಮೊತ್ತವನ್ನು ಲೆಕ್ಕಚಾರ ಮಾಡಿ ಬಾಕಿ ಮೊತ್ತವನ್ನು ವಸೂಲಿ ಮಾಡಲು ದಿನಾಂಕ:12.01.2024ರಂದು ಆದೇಶಿಸಿರುತ್ತಾರೆ. ಸದರಿ ಆದೇಶದ ವಿರುದ್ಧ ಬೆಂಗಳೂರು ಟರ್ಫ್ ಕ್ಲಬ್‌ನವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:3360/2024ನ್ನು ದಾವೆ ಹೂಡಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ವಿಚಾರಣೆ ನಡೆಸಿ ದಿನಾಂಕ:02.02.2024ರ ಆದೇಶದಲ್ಲಿ ಪ್ರಸ್ತುತ ಯಾವುದೇ ಪೂರ್ವಭಾವಿ ಕ್ರಮ ಕೈಗೊಳ್ಳದಂತೆ ಹಾಗೂ ಬೆಂಗಳೂರು ಟರ್ಫ್ ಕ್ಲಬ್ ನವರು ದಿನಾಂಕ: 05.02.2024ರಂದು ಜಂಟಿ ಆಯುಕ್ತರು (ಪೂರ್ವ) ಇವರಿಗೆ ಮನವಿ ಸಲ್ಲಿಸುವಂತೆ ನಿರ್ದೇಶನ ನೀಡಿರುತ್ತಾರೆ.

ಸಂಖ್ಯೆ: ಆಇ 15 ಸಿಆರ್ ಸಿ 2024

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

ಅನುಬಂಧ

## ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ 2019-20ನೇ ಸಾಲಿನ, ಸಮಿತಿಯ 4ನೇ ವರದಿ (15ನೇ ವಿಧಾನ ಸಭೆ)ಯಲ್ಲಿನ ಶಿಫಾರಸ್ಸುಗಳಿಗೆ ಉತ್ತರ

| ಸಮಿತಿಯ ಶಿಫಾರಸ್ಸು | ಇಲಾಖೆಯ ಉತ್ತರ |
|---|---|
| 3. ಬೆಂಗಳೂರು ಟರ್ಫ್ ಕ್ಲಬ್‌ಗೆ ನೀಡಲಾಗಿರುವ ಪರವಾನಗಿಯನ್ನು ರದ್ದುಗೊಳಿಸುವ ಬಗ್ಗೆ .<br><br>ಮೈಸೂರು ರೇಸ್ ಕೋರ್ಸ್ ಲೈಸೆನ್ಸಿಂಗ್ ಆಕ್ಟ್ -1952 (ಪ್ರಸ್ತುತ ಕರ್ನಾಟಕ ರೇಸ್ ಕೋರ್ಸ್‌ಗಳಿಗೆ ಪರವಾನಗಿ ನೀಡುವ ಕಾಯ್ದೆ, 2020) ಮತ್ತು ಮೈಸೂರು ರೇಸ್ ಕೋರ್ಸ್‌ಸ್ ಲೈಸೆನ್ಸಿಂಗ್ ರೂಲ್ಸ್-1952ರ (ಪ್ರಸ್ತುತ ಕರ್ನಾಟಕ ರೇಸ್ ಕೋರ್ಸ್‌ಗಳಿಗೆ ಪರವಾನಗಿ ನೀಡುವ ನಿಯಮಗಳು, 2020) ನಿಯಮಗಳನ್ನು ಬೆಂಗಳೂರು ಟರ್ಫ್ ಕ್ಲಬ್ ಸಂಸ್ಥೆಯು ಉಲ್ಲಂಘಿಸಿರುವುದರಿಂದ ಆರ್ಥಿಕ ಇಲಾಖೆಗೆ ಪರವಾನಗಿಯನ್ನು ರದ್ದು ಮಾಡುವ ಸಂಪೂರ್ಣ ಅಧಿಕಾರವಿದ್ದರೂ, ಇಲ್ಲಿಯವರೆಗೂ ಯಾವುದೇ ಕ್ರಮ ವಹಿಸದಿರುವುದು ತೀರ ವಿಷಾದನೀಯವೆಂದು ಸಮಿತಿಯು ಖೇದ ವ್ಯಕ್ತಪಡಿಸುತ್ತದೆ. ಪರವಾನಗಿಯ ನವೀಕರಣವನ್ನು ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ಪಡೆದೆ ಮಾಡಲಾಗಿದ್ದು, ಪರವಾನಗಿಯನ್ನು ರದ್ದುಗೊಳಿಸಬೇಕಿದ್ದರೂ, ಹಣಕಾಸು ಖಾತೆಯನ್ನು ನಿರ್ವಹಿಸುತ್ತಿರುವ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಸೂಕ್ತ ಕ್ರಮಕ್ಕೈಗೊಳ್ಳಬೇಕೆಂದು ಆರ್ಥಿಕ ಇಲಾಖೆಯ ಅಧಿಕಾರಿಗಳು ಸಮಿತಿಗೆ ಸಾಕ್ಷ್ಯ ಒದಗಿಸಿದ್ದರಿಂದ, ಮೇಲ್ಕಂಡ ಕಾಯ್ದೆ ಮತ್ತು ನಿಯಮಾವಳಿಗಳನ್ನು ಬೆಂಗಳೂರು ಟರ್ಫ್ ಕ್ಲಬ್ ಸಂಸ್ಥೆಯು ಉಲ್ಲಂಘನೆ ಮಾಡಿರುವುದರಿಂದ, | ಬೆಂಗಳೂರು ಟರ್ಫ್ ಕ್ಲಬ್ ನಡೆಸುವ ರೇಸ್ ಪಂದ್ಯಗಳಿಗೆ ಪಾವತಿಸುವ ಲೈಸೆನ್ಸ್ ಶುಲ್ಕದಿಂದ ಸರ್ಕಾರಕ್ಕೆ ರಾಜಸ್ವ ಸ್ವೀಕೃತಿ ಜಮೆಯಾಗುತ್ತಿದೆ. ಇಲ್ಲಿಯವರೆಗೆ ಲೈಸೆನ್ಸ್ ಶುಲ್ಕದ ಪಾವತಿಯಲ್ಲಿ ಬೆಂಗಳೂರು ಟರ್ಫ್ ಕ್ಲಬ್ ನಿಂದ ಯಾವುದೇ ತೊಡಕು ಉಂಟಾಗಿರುವುದಿಲ್ಲ. 2020-21ನೇ ಸಾಲಿಗೆ ಒಟ್ಟು ರೂ.21.61/- ಕೋಟಿಗಳು ಹಾಗೂ 2021-22ನೇ ಸಾಲಿಗೆ ಒಟ್ಟು ರೂ.16.32/- ಕೋಟಿಗಳಷ್ಟು ತೆರಿಗೆ, ಪರವಾನಗಿ ಶುಲ್ಕ ಹಾಗೂ ಇತರೆ ಮೂಲಗಳಿಂದ ಸಂಗ್ರಹವಾಗಿರುತ್ತದೆ ".<br><br>ಬೆಂಗಳೂರು ಟರ್ಫ್ ಕ್ಲಬ್ ಆವರಣವನ್ನು ಖಾಲಿ ಮಾಡಿ ಸರ್ಕಾರಕ್ಕೆ ಹಸ್ತಾಂತರಿಸುವ ಕುರಿತಾದ ರಾಜ್ಯ ಉಚ್ಚ ನ್ಯಾಯಾಲಯದ ದಿನಾಂಕ:22/03/2010ರ ಆದೇಶವನ್ನು ಬೆಂಗಳೂರು ಟರ್ಫ್ ಕ್ಲಬ್‌ನಿಂದ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ SPECIAL LEAVE PETITION ಸಂಖ್ಯೆ:21157/2010 ಪ್ರಶ್ನಿಸಿದ್ದು, ಮಾನ್ಯ ಸರ್ವೋಚ್ಛ ನ್ಯಾಯಾಲಯದಿಂದ "ಯಥಾಸ್ಥಿತಿ" ಕಾಯ್ದುಕೊಳ್ಳಲು ಆದೇಶಿಸಲಾಗಿರುತ್ತದೆ.<br><br>ಲೋಕೋಪಯೋಗಿ ಇಲಾಖೆಯು ಗುತ್ತಿಗೆ ಆಧಾರದ ಮೇಲೆ ಜಮೀನನ್ನು ಬೆಂಗಳೂರು ಟರ್ಫ್ ಕ್ಲಬ್ ಗೆ ಹಸ್ತಾಂತರಿಸಿರುವುದರಿಂದ, ಸದರಿ ವಿಷಯದ ಬಗ್ಗೆ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯವನ್ನು ಕೋರಿದ್ದು, ದಿನಾಂಕ 22.11.2019ರ ಪತ್ರದಲ್ಲಿ ಈ ಕೆಳಕಂಡಂತೆ ಅಡ್ವೋಕೇಟ್ ಜನರಲ್ ತಮ್ಮ ಅಭಿಪ್ರಾಯವನ್ನು ನೀಡಿರುತ್ತಾರೆ. |

| | |
|---|---|
| ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಶೀಘ್ರವಾಗಿ ತಂದು ಸಂಸ್ಥೆಗೆ ನೀಡಿರುವ ಪರವಾನಗಿಯನ್ನು ರದ್ದುಗೊಳಿಸಲು ಆರ್ಥಿಕ ಇಲಾಖೆಯ ಅಧಿಕಾರಿಗಳು ಜರೂರಾಗಿ ಕ್ರಮ ವಹಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. | *"on examining the matter, although the issue before the Hon'ble Supreme Court does not relate to the quantum of rent payable by the Bangalore Turf Club, any demand of rent at this stage may be viewed as a violation of the undertaking given by the then learned Advocate General on 07.09.2010. It is, therefore, advised that the proposed notice be kept on hold until the Hon'ble Supreme Court hears and disposes of the Appeal or further orders in this regard is obtained by the Hon'ble Supreme Court "*<br><br>ಮುಂದುವರೆದು, ಲೋಕೋಪಯೋಗಿ ಇಲಾಖೆಯು ದಿನಾಂಕ:27.12.2019ರಂದು ರಾಜ್ಯಸಚಿವ ಸಂಪುಟದ ಸಭೆಯಲ್ಲೂ ಈ ವಿಷಯದ ಬಗ್ಗೆ ಪ್ರಸ್ತಾವನೆಯನ್ನು ಮಂಡಿಸಿದ್ದು, ಸಭೆಯಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ತೀರ್ಮಾನಿಸಲಾಗಿರುತ್ತದೆ.<br><br>ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್‌ಗೆ ಮೂರು ತಿಂಗಳಿಗೊಮ್ಮೆ ಮಾನ್ಯ ಮುಖ್ಯಮಂತ್ರಿಯವರ ಅನುಮತಿ ಪಡೆದು ಸರ್ಕಾರದ ಷರತ್ತುಬದ್ಧ ಲೈಸೆನ್ಸ್ ನೀಡಲಾಗುತ್ತಿದ್ದು, ಲಾಕ್-ಡೌನ್ ಕಟ್ಟುನಿಟ್ಟು ಜಾರಿಗೆಯಾಗಿದ್ದರಿಂದ ರೇಸ್ ಚಟುವಟಿಕೆಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿತ್ತು. ಮಾನ್ಯ ಮುಖ್ಯಮಂತ್ರಿಯವರು ಕಡತ ಸಂಖ್ಯೆ: **FD 07 CRC/2020(e)** ರಲ್ಲಿ ದಿನಾಂಕ:29/08/2020ರ ಅನುಮಮೋದನೆಯಂತೆ **Spectator less closed door racing** ಪಂದ್ಯಗಳನ್ನು ಪುನರಾರಂಭಿಸಲಾಗಿತ್ತು, ಮುಂದುವರಿದು ದಿನಾಂಕ 05.11.2021 ರ ಸರ್ಕಾರದ ಆದೇಶ ಸಂಖ್ಯೆ ಆರ್.ಡಿ 158 ಟಿ.ಎನ್. ಆರ್ 2020 ರನ್ವಯ ರೇಸಿಂಗ್ ಪಂದ್ಯಗಳನ್ನು ಜಾರಿಯಲ್ಲಿರುವ COVID-19ರ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು ಪುನರಾರಂಭಿಸಲಾಯಿತು. ಇದರಂತೆ, ಪ್ರಸ್ತುತದವರೆಗೂ ಇಲಾಖಾ ಮುಖ್ಯಸ್ಥರ ಅನುಮೋದನೆಯೊಂದಿಗೆ ಲೈಸೆನ್ಸ್ ನೀಡಲಾಗುತ್ತಿದೆ. |

Dr. EKROOP CAUR
Secretary to Govt.
(Budget & Resources)
Finance Department